ಸಿ. ಸಿ. ನಂ.- **354/24**

ಪಿ.ಡಬ್ಲ್ಯೂ. **1**

ಸಾಕ್ಷಿಯು ದಿನಾಂಕ- **14-01-2026** ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು- ಆರೋಪಿ ಪರ ಶ್ರೀ ಬಿ ಎಸ್ ವಕೀಲರಿಂದ -

ನಾನು ಪಿರ್ಯಾದಿ ಸೊಸೈಟಿಯಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದೇನೆ. ದಿಃ **28.12.2018** ರಂದು ಆರೋಪಿಗೆ ರೂ.**10** ಲಕ್ಷ ಸಾಲವನ್ನು ಪಿರ್ಯಾದಿ ಸೊಸೈಟಿ ಕೊಟ್ಟಿರುತ್ತದೆ. ನಮ್ಮ ಪಿರ್ಯಾದಿ ಸೊಸೈಟಿಯಲ್ಲಿ ಆರೋಪಿ ಸದಸ್ಯತ್ವ ಪಡೆದಿರುತ್ತಾರೆ. ಹೀಗೆ ಸದಸ್ಯತ್ವ ಪಡೆದಾಗ ರೂ.**100/-** ಮೊತ್ತದ ಠೇವಣಿ ಮಾಡಿರುತ್ತಾರೆ. ಸದರಿ ಜೊತೆ ಎಷ್ಟು ಮೊತ್ತವನ್ನು ಆರೋಪಿ ಡೆಪಾಸಿಟ್ ಮಾಡಿರುತ್ತಾರೆ ಎಂದರೆ ನನಗೆ ನಿಖರವಾಗಿ ನೆನಪಿಲ್ಲ. ಸಾಲ ಪಡೆದಾಗಿನಿಂದ ಇಲ್ಲಿಯವರೆಗೂ ಆರೋಪಿ ಎಷ್ಟು ಮೊತ್ತದ ಮರುಪಾವತಿ ಮಾಡಿರುತ್ತಾರೆ ಎಂದು ದಾಖಲೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಖಾತಾ ವಿವರ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸಾಲ ಕೊಡುವಾಗ ಗ್ರಾಹಕರಿಂದ ಸಾಲದ ಅರ್ಜಿ ಪಡೆಯುತ್ತೇವೆ. ಆರೋಪಿಗೆ ಯಾವ ಸಾಲದ ಖಾತೆಗೆ ಈ ಮೇಲೆ ಹೇಳಿದಂತೆ ಸಾಲ ಕೊಡಲಾಗಿದೆ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ಆರೋಪಿಗೆ ನಮ್ಮ ಸೊಸೈಟಿ ರೂ.**10** ಲಕ್ಷ ಮಾತ್ರ ಸಾಲವನ್ನಾಗಿ ಕೊಟ್ಟಿತ್ತು, ಬೇರೆ ಯಾವುದೇ ಸಾಲವನ್ನು ಕೊಟ್ಟಿರಲಿಲ್ಲ. ಹೀಗೆ ಸಾಲವನ್ನು ಕೊಡುವಾಗ ಭದ್ರತೆಗಾಗಿ ಪ್ರಾಂಸರಿ ಪತ್ರವನ್ನು ಆರೋಪಿಯಿಂದ ಪಡೆದಿರುತ್ತೇವೆ. ಸದರಿ ಪ್ರಾಂಸರಿ ಪತ್ರ ಮತ್ತು ಸಾಲದ ಅರ್ಜಿಯ ನಕಲು ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿಯ ಮೂಲ ಪ್ರತಿಗಳನ್ನು ನ್ಯಾಯಾಲಯ ಕೇಳಿದರೆ ಸಲ್ಲಿಸುತ್ತೇನೆ. ಸದರಿ ಸಾಲ ಕೊಡುವಾಗ ಆರೋಪಿಯ ಮನೆಯನ್ನು ಅಡಮಾನವಾಗಿ ಪಡೆದಿರುತ್ತೇವೆ. ಸದರಿ ಸಾಲಕ್ಕೆ ಸಂಬಂಧಪಟ್ಟಂತೆ ಬೆಂಗಳೂರಿನಲ್ಲಿ ಡಿ ಆರ್ ಡಿ ಯಲ್ಲಿ ಕೇಸು ಮಾಡಿರುತ್ತೇವೆ ಎಂದರೆ ಸರಿ. ಅಲ್ಲಿ ಎಷ್ಟು ಮೊತ್ತಕ್ಕೆ ಸಂಬಂಧಪಟ್ಟಂತೆ ಕೇಸು ಹಾಕಿರುತ್ತೀರಾ ಎಂದರೆ ಸಾಕ್ಷಿ ರೂ.**10** ಲಕ್ಷಕ್ಕೆ ಸಂಬಂಧಪಟ್ಟಂತೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿರುವ ಸಾಲವು ಹಾಗೂ ಬೆಂಗಳೂರಿನಲ್ಲಿ ಸಲ್ಲಿಸಿದ ಕೇಸಿಗೆ ಸಂಬಂಧಪಟ್ಟ ಸಾಲವು ಎರಡು ಒಂದೇ ಎಂದರೆ ಸರಿ. ಆರೋಪಿಯು ಕಂತುಗಳಲ್ಲಿ ಸಾಲದ ಮರುಪಾವತಿ ಮಾಡಿದ್ದರೂ ಸಹ

ಸಿ. ಸಿ. ನಂ.- **354/24**

ಪಿ.ಡಬ್ಲ್ಯೂ. **1**

ಅದನ್ನು ಖಾತಾ ವಿವರದಲ್ಲಿ ತೋರಿಸದೇ ಅವರ ರೂ.1 ಲಕ್ಷ ಎಫ್ ಡಿ ಇದ್ದರೂ ಕೂಡ ಈ ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಇನ್ನೂ ಹೆಚ್ಚಿನ ಪಾಟೀಸವಾಲಿಗಾಗಿ ಸಮಯಾವಕಾಶವನ್ನು ಕೇಳಿದ್ದು ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಸಹಿ/-

1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ವಿಜಯನಗರ ಜಿಲ್ಲೆ, ಹೊಸಪೇಟೆ.